# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **363**

ಸದಸ್ಯರ ಹೆಸರು : ಶ್ರೀ ಕೇಶವ್ ಪ್ರಸಾದ್
(ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : **13.08.2025**

ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಭೂ ಸುಧಾರಣಾ ಕಾನೂನು 1961ರ ಪ್ರಕಾರ ಅಂದು ಜಾರಿ ಮಾಡಲಾಗದ ಪ್ರಕರಣವನ್ನು ಇಂದು ಜಾರಿಗೆ ತರಲು ಕಾನೂನಿನಲ್ಲಿ ಅವಕಾಶ ಇದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961 ಪ್ರಸ್ತುತ ಜಾರಿಯಲ್ಲಿರುತ್ತದೆ. |
| ಆ) | ಸ್ವಂತ ಜಮೀನು ಹೊಂದಿರುವ ವ್ಯಕ್ತಿಗೆ ಭೂ ಸುಧಾರಣಾ ಕಾಯ್ದೆಯ ಕಾನೂನು ಅಡಿಯಲ್ಲಿ ಜಮೀನು ಮಂಜೂರು ಮಾಡಲು ಕಾನೂನಿನಲ್ಲಿ ಅವಕಾಶವಿದೆಯೇ; (ಸಂಪೂರ್ಣ ಮಾಹಿತಿ ಒದಗಿಸುವುದು) | ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ಕಲಂ-63 ರಂತೆ ಭೂಮಿಯ ಗರಿಷ್ಠ ಮಿತಿಗೊಳಪಟ್ಟು ಜಮೀನನ್ನು ಮಂಜೂರು ಮಾಡಲು ಅವಕಾಶವಿದೆ. ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ಕಲಂ 63ರಲ್ಲಿಯ ಮಾಹಿತಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಇ) | ಪೂರ್ವಜರ ಆಸ್ತಿಯಲ್ಲಿ ಉಳುಮೆ ಮಾಡುತ್ತಿರುವ ಕುಟುಂಬಗಳನ್ನು ಭೂ ಸುಧಾರಣಾ ಕಾಯ್ದೆ ಅಡಿಯಲ್ಲಿ ಇಂದು ಒಕ್ಕಲೆಬ್ಬಿಸಲು ಅವಕಾಶವಿದೆಯೇ? (ಸಂಪೂರ್ಣ ಮಾಹಿತಿ ಒದಗಿಸುವುದು) | ಪೂರ್ವಜರ ಆಸ್ತಿಯಲ್ಲಿ ಉಳುಮೆ ಮಾಡುತ್ತಿರುವ ಕುಟುಂಬಗಳನ್ನು ಭೂ ಸುಧಾರಣಾ ಕಾಯ್ದೆಯಡಿ ಒಕ್ಕಲೆಬ್ಬಿಸಲು ಅವಕಾಶವಿರುವುದಿಲ್ಲ. |

**ಸಂಖ್ಯೆ: ಕಂಇ 6 ಎಲ್ಆರ್ಎಸ್ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

ಅವುಗಳ ಸವಕಳಿ ಮೌಲ್ಯವನ್ನೂ, ಭೂಮಿಯನ್ನು ಬಿಟ್ಟು ಕೊಡುವ ವ್ಯಕ್ತಿಗೆ ಮತ್ತು ಭೂಮಿಯಲ್ಲಿ ಹಿತಾಸಕ್ತಿಯುಳ್ಳ ಇತರ ವ್ಯಕ್ತಿಗಳಿಗೆ ರಾಜ್ಯ ಸರ್ಕಾರವು ಸಂದಾಯ ಮಾಡತಕ್ಕದ್ದು. ಬಿಟ್ಟು ಕೊಟ್ಟ ಆ ಭೂಮಿಯು ಆನಂತರ ರಾಜ್ಯ ಸರ್ಕಾರದ ವಶದಲ್ಲಿರತಕ್ಕದ್ದು ಮತ್ತು [1][ನ್ಯಾಯಾಧಿಕರಣವು] ಆನಂತರ ಅದನ್ನು ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ ಹೆಚ್ಚುವರಿ ಭೂಮಿಯಂತೆ ವಿಲೇ ಮಾಡಬಹುದು.

## ಅಧ್ಯಾಯ – IV

## ಭೂ ಹಿಡುವಳಿಗಳ ಗರಿಷ್ಠ ಮಿತಿ

[2][63. ಭೂಮಿಯ ಗರಿಷ್ಠ ಮಿತಿ.–(1) ಕುಟುಂಬದವರಲ್ಲಿ ಒಬ್ಬನಾಗಿರದ ಅಥವಾ ಕುಟುಂಬವನ್ನೇ ಹೊಂದಿರದ ಯಾರೇ ವ್ಯಕ್ತಿಯು ಮತ್ತು ಯಾವುದೇ ಕುಟುಂಬವೂ ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಭೂ ಒಡೆಯನಾಗಿ ಆಗಲಿ, ಭೂ ಮಾಲೀಕನಾಗಿ ಆಗಲಿ ಅಥವಾ ಗೇಣಿದಾರನಾಗಿ ಆಗಲಿ ಅಥವಾ ಅಡಮಾನ ಪಡೆದವನಾಗಿ ಆಗಲಿ ಗರಿಷ್ಠ ಮಿತಿ ವಿಸ್ತೀರ್ಣಕ್ಕಿಂತ ಹೆಚ್ಚಿನ ಭೂಮಿಯನ್ನು ಸ್ವಾಧೀನದ ಸಹಿತ ಅಥವಾ ಅನ್ಯಥಾ ಅಥವಾ ಭಾಗಶಃ ಒಂದು ಸಾಮರ್ಥ್ಯದಲ್ಲಿ ಅಥವಾ ಭಾಗಶಃ ಬೇರೊಂದು ಸಾಮರ್ಥ್ಯದಲ್ಲಿ ಧಾರಣ ಮಾಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(2) ಕುಟುಂಬದವರಲ್ಲಿ ಒಬ್ಬನಾಗಿರದ ಅಥವಾ ಕುಟುಂಬವಿಲ್ಲದ ವ್ಯಕ್ತಿಗೆ ಅಥವಾ ಒಂದು ಕುಟುಂಬಕ್ಕೆ ಭೂಮಿಯ ಗರಿಷ್ಠ ಮಿತಿ ವಿಸ್ತೀರ್ಣವು ಹತ್ತು ಯೂನಿಟ್‌ಗಳು ಆಗಿರತಕ್ಕದ್ದು:

ಪರಂತು, ಐದಕ್ಕಿಂತ ಹೆಚ್ಚು ಜನರನ್ನೊಳಗೊಂಡ ಕುಟುಂಬದ ಸಂದರ್ಭದಲ್ಲಿ ಭೂಮಿಯ ಗರಿಷ್ಠ ಮಿತಿ ವಿಸ್ತೀರ್ಣವು, ಹತ್ತು ಯೂನಿಟ್‌ಗಳು ಆಗಿರತಕ್ಕದ್ದು. ಅಲ್ಲದೆ ಐದಕ್ಕಿಂತ ಹೆಚ್ಚಿನ ಪ್ರತಿಯೊಬ್ಬನೂ ಹೆಚ್ಚಿನ ಎರಡು ಯೂನಿಟ್‌ಗಳನ್ನು ಹೊಂದಿರತಕ್ಕದ್ದು. ಆದರೆ, ಭೂಮಿಯ ಗರಿಷ್ಠ ಮಿತಿಯ ಒಟ್ಟು ವಿಸ್ತೀರ್ಣವು ಇಪ್ಪತ್ತು ಯೂನಿಟ್‌ಗಳನ್ನು ಮೀರತಕ್ಕದ್ದಲ್ಲ.

[3][(2–ಎ) ಪ್ರಕರಣ 5ರ (2)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಗೇಣಿದಾರನಾಗಿರುವ ವ್ಯಕ್ತಿಗೆ ಭೂಮಿಯ ಗರಿಷ್ಠ ಮಿತಿಯ ವಿಸ್ತೀರ್ಣವು ನಲವತ್ತು ಯೂನಿಟ್‌ಗಳು ಆಗಿರತಕ್ಕದ್ದು.]

ಪ್ರಕರಣ 5ರ (2)ನೇ ಉಪ–ಪ್ರಕರಣದ (ಬಿ) ಖಂಡದ ಮೇರೆಗೆ ಗೇಣಿದಾರನಾಗಿರುವ ವ್ಯಕ್ತಿಗೆ ಭೂಮಿಯ ಗರಿಷ್ಠ ಮಿತಿಯ ವಿಸ್ತೀರ್ಣವು ನಲವತ್ತು ಯೂನಿಟ್‌ಗಳು ಆಗಿರತಕ್ಕದ್ದು.]

(3) ಕುಟುಂಬದ ಸಂದರ್ಭದಲ್ಲಿ ಭೂಮಿಯ ಗರಿಷ್ಠ ಮಿತಿಯ ವಿಸ್ತೀರ್ಣವು 'ಸ್ತ್ರೀ ಧನ' ಭೂಮಿಯು ಸೇರಿ ಕುಟುಂಬದವರೆಲ್ಲರೂ ಧಾರಣ ಮಾಡಿರುವ , ಒಟ್ಟು ಭೂಮಿಗಳಿಗೆ ಅನ್ವಯವಾಗತಕ್ಕದ್ದು.

(4) ಕುಟುಂಬದವರಲ್ಲಿ ಒಬ್ಬನಾಗಿರದ, ಆದರೆ ಅವಿಭಕ್ತ ಕುಟುಂಬದವರಲ್ಲಿ ಒಬ್ಬನಾಗಿರುವ ವ್ಯಕ್ತಿಯು ಧಾರಣ ಮಾಡಿರುವ ಭೂಮಿಯ ವಿಸ್ತೀರ್ಣವನ್ನು ಲೆಕ್ಕ ಹಾಕುವಾಗ ಮತ್ತು ಅವಿಭಕ್ತ ಕುಟುಂಬದವರಲ್ಲಿ ಒಬ್ಬನು ಸಹ ಆಗಿರುವ ಕುಟುಂಬದವರಲ್ಲಿ ಒಬ್ಬನು ಧಾರಣ ಮಾಡಿರುವ ಭೂಮಿಯ ವಿಸ್ತೀರ್ಣವನ್ನು ಲೆಕ್ಕ ಹಾಕುವಾಗ, ಅವಿಭಕ್ತ ಕುಟುಂಬವು ಧಾರಣ ಮಾಡಿರುವ ಭೂಮಿಗಳಲ್ಲಿ ಅಂತಹವನ ಪಾಲನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ಅವನು ಪ್ರತ್ಯೇಕವಾಗಿ ಧಾರಣ ಮಾಡಿರುವ ಭೂಮಿಯು ಯಾವುದಾದರೂ ಇದ್ದರೆ, ಅದನ್ನು ಆ ಪಾಲಿಗೆ ಸೇರಿಸತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಅಂಥ ಪಾಲನ್ನು ಅವಿಭಕ್ತ ಕುಟುಂಬವು ಧಾರಣ ಮಾಡಿದ್ದ ಭೂಮಿಗಳನ್ನು ವಿಭಾಗ ಮಾಡಿಕೊಂಡಿದಿದ್ದರೆ ಅಂಥ ವ್ಯಕ್ತಿಯ ಪಾಲಿಗೆ ಬರಬಹುದಾಗಿದ್ದ ಭೂಮಿಯ ವಿಸ್ತೀರ್ಣವೆಂದು ಭಾವಿಸತಕ್ಕದ್ದು.

(5) ಖಾಸಗಿ ಟ್ರಸ್ಟ್‌ನ ಒಡೆತನದಲ್ಲಿರುವ ಅಥವಾ ಅದು ಧಾರಣ ಮಾಡಿರುವ ಭೂಮಿಗ ಸಂಬಂಧದಲ್ಲಿ,–

1. "ತಹಸೀಲ್ದಾರ್" ಎಂಬ ಪದದ ಬದಲಾಗಿ 1974ರ ಅಧಿನಿಯಮ ಸಂಖ್ಯೆ 1ರ ಮೂಲಕ ದಿನಾಂಕ 1–3–1974ರಿಂ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.
2. 1974ರ ಅಧಿನಿಯಮ ಸಂಖ್ಯೆ 1ರ ಮೂಲಕ ದಿನಾಂಕ 1–3–1974ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.
3. 1995ರ ಅಧಿನಿಯಮ ಸಂಖ್ಯೆ 31ರ ಮೂಲಕ ದಿನಾಂಕ 20–10–1995ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಎ) ಟ್ರಸ್ಟ್‌ನಕರ್ತನು ಟ್ರಸ್ಟ್‌ನ್ನು ರದ್ದುಮಾಡಬಹುದಾಗಿದ್ದರೆ ಅಂಥ ಭೂಮಿಗಳನ ಅಂಥ ಟ್ರಸ್ಟ್‌ಕರ್ತನು ಅಥವಾ ಹಿತಾಸಕ್ತಿ ಹೊಂದಿರುವ ಅವನ ವಾರಸುಧಾರನ ಧಾರಣ ಮಾಡಿರುವುದಾಗಿ ಭಾವಿಸತಕ್ಕದ್ದು, ಮತ್ತು

(ಬಿ) ಇತರ ಸಂದರ್ಭಗಳಲ್ಲಿ, ಟ್ರಸ್ಟ್‌ನ ಫಲಾನುಭವಿಗಳು ಅಂಥ ಟ್ರಸ್ಟ್‌ನಲ್ಲಿ ಅಥವ ಅದರಿಂದ ಬಂದ ವರಮಾನದಲ್ಲಿ, ಅವರವರು ಹೊಂದಿರುವ ಹಿತಾಸಕ್ತಿಗ ಪ್ರಮಾಣಕ್ಕನುಸಾರವಾಗಿ ಅಂಥ ಭೂಮಿಗಳನ್ನು ಧಾರಣ ಮಾಡಿರುವರೆಂದ ಭಾವಿಸತಕ್ಕದ್ದು.

ವಿವರಣೆ.–ಟ್ರಸ್ಟ್ ಭಾಗಶಃ ಖಾಸಗಿಯಾಗಿದ್ದು, ಭಾಗಶಃ ಸಾರ್ವಜನಿಕವಾಗಿದ್ದರೆ, ಈ ಉಪಪ್ರಕರಣವು ಟ್ರಸ್ಟ್‌ನ ಆಸ್ತಿಗಳ ಎಷ್ಟು ಭಾಗವು ಖಾಸಗಿ ಟ್ರಸ್ಟ್‌ಗೆ ಸೇರಿರುತ್ತದೋ ಆ ಭಾಗಕ್ಕೆ ಸೇರಿ ಭೂಮಿಗಳಿಗೆ ಮಾತ್ರ ಅನ್ವಯಿಸತಕ್ಕದ್ದು.

(6) ಕುಟುಂಬದವರಲ್ಲಿ ಒಬ್ಬನಾಗಿರದ ಅಥವಾ ಕುಟುಂಬವನ್ನೇ ಹೊಂದಿರದ ವ್ಯಕ್ತಿಯು ಅಥವಾ ಕುಟುಂಬದ ವ್ಯಕ್ತಿಯು ಧಾರಣ ಮಾಡಿರುವ ಭೂಮಿಯ ವಿಸ್ತೀರ್ಣವನ್ನು ಲೆಕ್ಕ ಹಾಕುವಾಗ, ಸಹಕಾ ಬೇಸಾಯ ಕ್ಷೇತ್ರದ ಭೂಮಿಗಳಲ್ಲಿ ಅಂಥ ವ್ಯಕ್ತಿಯ ಅಥವಾ ಕುಟುಂಬದ ವ್ಯಕ್ತಿಯ ಪಾಲನ್ನು ಲೆಕ್ಕ ತೆಗೆದುಕೊಳ್ಳತಕ್ಕದ್ದು.

(7) (ಎ) ಶೈಕ್ಷಣಿಕ, ಧಾರ್ಮಿಕ ಅಥವಾ ಧರ್ಮದಾಯ ಉದ್ದೇಶಕ್ಕಾಗಿ ರಚಿತವಾಗಿರುವ ಸ್ವತ್ತನ ಧಾರಣ ಮಾಡುವ ಸಾಮರ್ಥ್ಯವುಳ್ಳ ಸಾರ್ವಜನಿಕ ಸ್ವರೂಪದ್ದಾಗಿರುವ ಯಾವುದೇ ಶೈಕ್ಷಣಿಕ, ಧಾರ್ಮಿ ಅಥವಾ ಧರ್ಮದಾಯ ಸಂಸ್ಥೆಯೂ ಅಥವಾ ಸಂಘವೂ ಅಥವಾ ಟ್ರಸ್ಟ್ , ಭೂಮಿಯಿಂದ ಬರು ವರಮಾನವನ್ನು ಸಂಬಂಧಪಟ್ಟ ಸಂಸ್ಥೆಗಾಗಿ ಅಥವಾ ಸಂಘಕ್ಕಾಗಿ ಅಥವಾ ಟ್ರಸ್ಟ್‌ಗಾಗಿ ಮಾತ್ರವೇ ವಿನಿಯೋಗಿಸುತ್ತಿದ್ದ ಹೊರತು ಅಂಥ ಭೂಮಿಯನ್ನು ಧಾರಣ ಮಾಡತಕ್ಕದ್ದಲ್ಲ. ಅಂಥ ಸಂಸ್ಥೆಯು ಸಂಘವು ಅಥವಾ ಟ್ರಸ್ಟ್ ಭೂಮಿಯನ್ನು ಹಾಗೆ ಧಾರಣ ಮಾಡಿದ್ದರೆ ಗರಿಷ್ಠ ಮಿತಿ ವಿಸ್ತೀರ್ಣವು ಇಪ್ಪತ ಯೂನಿಟ್‌ಗಳು ಆಗಿರತಕ್ಕದ್ದು.

(ಬಿ) ಭೂಮಿಯಿಂದ ಬರುವ ವರಮಾನವನ್ನು ಸಂಸ್ಥೆಗಾಗಿ, ಸಂಘಕ್ಕಾಗಿ ಅಥವ ಟ್ರಸ್ಟ್‌ಗಾಗಿ ಮಾತ್ರವೇ ವಿನಿಯೋಗಿಸಲಾಗಿದೆಯೇ ಎಂಬ ಯಾವುದೇ ಪ್ರಶ್ನೆಯ ಉದ್ಭವಿಸಿದರೆ, ಅದನ್ನು ನಿಯಮಿಸಿದ ಪ್ರಾಧಿಕಾರಿಯು ತೀರ್ಮಾನಿಸತಕ್ಕದ್ದು ನಿಯಮಿಸಿದ ಪ್ರಾಧಿಕಾರಿಯ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು ವರಮಾನವನ್ನು ಹಾಗೆ ವಿನಿಯೋಗಿಸಿಲ್ಲವೆಂದು ನಿಯಮಿಸಿದ ಪ್ರಾಧಿಕಾರಿಯ ತೀರ್ಮಾನಿಸಿದರೆ, ಸಂಸ್ಥೆಯು, ಸಂಘವು ಅಥವಾ ಟ್ರಸ್ಟ್ ಧಾರಣ ಮಾಡಿರು ಭೂಮಿಯನ್ನು ಹೆಚ್ಚುವರಿ ಭೂಮಿಯೆಂದು ಭಾವಿಸತಕ್ಕದ್ದು ಮತ್ತು 66 ರಿಂದ 76ರ ವರೆಗಿನ ಪ್ರಕರಣಗಳ ಉಪಬಂಧಗಳು, ಅಂತಹ ಭೂಮಿಯನ್ನು ರಾಜ್ಯ ಸರ್ಕಾರಕ್ಕೆ ಬಿಟ್ಟು ಕೊಡುವುದಕ್ಕೆ ಮತ್ತು ಅಂಥ ಭೂಮಿಯು ರಾಜ್ಯಸರ್ಕಾರದಲ್ಲಿ ನಿಹಿತವಾಗುವುದಕ್ಕೆ ಸಾಧ್ಯವಾಗಬಹುದೆಷ್ಟರ ಮಟ್ಟಿಗೆ ಅನ್ವಯವಾಗತಕ್ಕದ್ದು. ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಈ ಉಪ–ಪ್ರಕರಣದ ಉಪಬಂಧಗಳು ಪರಿಣಾಮವುಳ್ಳವುಗಳಾಗಿರತಕ್ಕದ್ದು.

(8) (ಎ) ಯಾವುದೇ ಸಕ್ಕರೆ ಕಾರ್ಖಾನೆಯು ಸಂಶೋಧನೆಯ ಅಥವಾ ಬಿತ್ತನೆ ಬೀಜ ಕ್ಷೇತ್ರದ ಅಥವಾ ಆ ಎರಡರ ಉದ್ದೇಶಕ್ಕಾಗಿ ಮಾತ್ರವೇ ಹೊರತು, ಭೂಮಿಯನ್ನು ಧಾರಣ ಮಡತಕ್ಕದ್ದಲ್ಲ. ಅಂತಹ ಉದ್ದೇಶಕ್ಕಾಗಿ ಸಕ್ಕರೆ ಕಾರ್ಖಾನೆಯು ಭೂಮಿಯನ್ನು ಧಾರಣ ಮಾಡಿದ್ದರೆ ಭೂಮಿಯ ಗರಿಷ್ಠ ಮಿತಿಯ ವಿಸ್ತೀರ್ಣವು ಐವತ್ತು ಯೂನಿಟ್‌ಗಳು ಆಗಿರತಕ್ಕದ್ದು.

(ಬಿ) ಸಕ್ಕರೆ ಕಾರ್ಖಾನೆಯು ಧಾರಣ ಮಾಡಿರುವ ಯಾವುದೇ ಭೂಮಿಯನ್ನು ಸಂಶೋಧನೆಯ ಅಥವಾ ಬಿತ್ತನೆ ಬೀಜ ಕ್ಷೇತ್ರದ ಅಥವಾ ಇವೆರಡರ ಉದ್ದೇಶಕ್ಕಾಗಿ ಮಾತ್ರವೇ ಬಳಸಲಾಗುತ್ತಿದೆಯೇ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಆ ಬಗ್ಗೆ ನಿಯಮಿಸಿದ ಪ್ರಾಧಿಕಾರಿಯ ತೀರ್ಮಾನವೇ

ಅಂತಿಮವಾದುದಾಗಿರತಕ್ಕದ್ದು ಮತ್ತು ಸದರಿ ಉದ್ದೇಶಕ್ಕಾಗಿ ಧಾರಣ ಮಾಡಿರದ ಭೂಮಿಯನ್ನು ಹೆಚ್ಚುವರಿ ಭೂಮಿಯೆಂದು ಭಾವಿಸತಕ್ಕದ್ದು ಮತ್ತು 66 ರಿಂದ 76 ರವರೆಗಿನ ಪ್ರಕರಣಗಳ ಉಪಬಂಧಗಳು, ಅಂತಹ ಭೂಮಿಯನ್ನು ರಾಜ್ಯ ಸರ್ಕಾರಕ್ಕೆ ಬಿಟ್ಟು ಕೊಡುವುದಕ್ಕೆ ಮತ್ತು ಅಂಥ ಭೂಮಿಯು ರಾಜ್ಯ ಸರ್ಕಾರದಲ್ಲಿ ನಿಹಿತವಾಗುವುದಕ್ಕೆ ಸಾಧ್ಯವಾಗಬಹುದಾದರಷ್ಟರ ಮಟ್ಟಿಗೆ ಅನ್ವಯವಾಗತಕ್ಕದ್ದು. ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಈ ಉಪ-ಪ್ರಕರಣದ ಉಪಬಂಧಗಳು ಪರಿಣಾಮವುಳ್ಳವುಗಳು ಆಗಿರತಕ್ಕದ್ದು.

(9) ನೆಡುತೋಪಿನ ಬೆಳೆಗಳನ್ನು ಬೆಳೆಯಲಾಗುವ ಭೂಮಿಯನ್ನು ಧಾರಣ ಮಾಡಿರುವ ಯಾರೇ ವ್ಯಕ್ತಿಯ ಸಂದರ್ಭದಲ್ಲಿ, 104ನೇ ಪ್ರಕರಣದ ವಿವರಣೆಯ (ii)ನೇ ಬಾಬಿನಲ್ಲಿ ಉಲ್ಲೇಖಿಸಿರುವ ಬೇಸಾಯ ಭೂಮಿಯನ್ನು ಗಣನೆಗೆ ತೆಗೆದುಕೊಂಡು ಅವನು ಧಾರಣ ಮಾಡಿರುವ ಇತರ ಭೂಮಿಯ ಗರಿಷ್ಠ ಮಿತಿಯ ವಿಸ್ತೀರ್ಣವನ್ನು ನಿರ್ಧರಿಸತಕ್ಕದ್ದು.

(10) ಹಿಂದಿನ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಯಾರೇ ವ್ಯಕ್ತಿಯು ವಿಭಾಗದ ಮೂಲಕ ಅಥವಾ ಕರ್ನಾಟಕ ಭೂದಾನ ಯಜ್ಞ ಅಧಿನಿಯಮ, 1963ರ (1963ರ ಕರ್ನಾಟಕ ಅಧಿನಿಯಮ 34) ಮೇರೆಗೆ ಸ್ಥಾಪಿತವಾದ, ಕರ್ನಾಟಕ ಭೂದಾನ ಯಜ್ಞ ಮಂಡಲಿಗೆ ದಾನದ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ಅನುಗುಣವಾಗಿ, ಅಂಥ ಭೂಮಿಯ ಗೇಣಿದಾರನಿಗೆ ಮಾರಾಟ ಮಾಡುವ ಮೂಲಕ ಹೊರತು, ಅನ್ಯಥಾ,-

(i) 1961ರ ನವೆಂಬರ್ 18ನೇ ದಿನಾಂಕದ ತರುವಾಯ, ಮತ್ತು 1971ರ ಜನವರಿ 24ನೇ ದಿನಾಂಕಕ್ಕೆ ಮೊದಲು ಯಾವ ಭೂಮಿಯ ವಿಸ್ತೀರ್ಣವನ್ನು ಅವನು ಉಳಿಸಿಕೊಂಡಿರುವ ಇತರ ಭೂಮಿಗೆ ಸೇರಿಸಿದರೆ, ತಿದ್ದುಪಡಿ ಅಧಿನಿಯಮದ ಪ್ರಾರಂಭದ ದಿನಾಂಕಕ್ಕೆ ಮೊದಲು ಹೆಚ್ಚುವರಿ ಭೂಮಿಯೆಂದು ಭಾವಿಸಲಾಗುತ್ತಿತ್ತೋ ಆ ಯಾವುದೇ ಭೂಮಿಯನ್ನು ವರ್ಗಾಯಿಸಿದ್ದರೆ; ಅಥವಾ

(ii) 1971ರ ಜನವರಿ 24ನೇ ದಿನಾಂಕದ ತರುವಾಯ ಯಾವುದೇ ಭೂಮಿಯನ್ನು ವರ್ಗಾಯಿಸಿದ್ದರೆ

– ಆ ವ್ಯಕ್ತಿಯು ಧಾರಣ ಮಾಡಲು ಹಕ್ಕಿರುವ ಭೂಮಿಯ ಗರಿಷ್ಠ ಮಿತಿಯ ವಿಸ್ತೀರ್ಣವನ್ನು ಲೆಕ್ಕ ಹಾಕುವಾಗ, ಹಾಗೆ ವರ್ಗಾಯಿಸಲಾದ ಭೂಮಿಯ ವಿಸ್ತೀರ್ಣವನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು ಮತ್ತು ಹಾಗೆ ಲೆಕ್ಕ ಹಾಕಲಾದ ಭೂಮಿಯ ಗರಿಷ್ಠ ಮಿತಿಯ ವಿಸ್ತೀರ್ಣಕ್ಕೆ ಮೀರುವ ಭೂಮಿಯನ್ನು ಅವನು ಉಳಿಸಿಕೊಂಡಿರುವ ಭೂಮಿಯು ವಾಸ್ತವವಾಗಿ ಭೂಮಿಯ ಗರಿಷ್ಠ ಮಿತಿಯ ವಿಸ್ತೀರ್ಣಕ್ಕೆ ಮೀರಿಲ್ಲದಿದ್ದರೂ, ಭೂಮಿಯ ಗರಿಷ್ಠ ಮಿತಿಯ ವಿಸ್ತೀರ್ಣಕ್ಕೆ ಮೀರಿದೆಂದು ಭಾವಿಸತಕ್ಕದ್ದು.

ಅಂಥ ವರ್ಗಾವಣೆಯ ಕಾರಣದಿಂದಾಗಿ ವ್ಯಕ್ತಿಯ ಹಿಡುವಳಿಯು, ಭೂಮಿಯ ಗರಿಷ್ಠ ಮಿತಿಯ ವಿಸ್ತೀರ್ಣಕ್ಕೆ ಮೀರಿರುವುದೆಂದು ಲೆಕ್ಕಹಾಕಲಾದ ವಿಸ್ತೀರ್ಣಕ್ಕಿಂತ ಕಡಿಮೆಯಿದ್ದರೆ ಅವನ ಎಲ್ಲ ಭೂಮಿಗಳು ಹೆಚ್ಚುವರಿ ಭೂಮಿಗಳಾಗಿವೆಯೆಂದು ಭಾವಿಸತಕ್ಕದ್ದು ಮತ್ತು 66 ರಿಂದ 76ರ ವರೆಗಿನ ಪ್ರಕರಣಗಳ ಉಪಬಂಧಗಳು ಅಂಥ ಹೆಚ್ಚುವರಿ ಭೂಮಿಯನ್ನು ರಾಜ್ಯ ಸರ್ಕಾರಕ್ಕೆ ಬಿಟ್ಟು ಕೊಡುವುದಕ್ಕೆ ಮತ್ತು ರಾಜ್ಯ ಸರ್ಕಾರದಲ್ಲಿ ಅದು ನಿಹಿತವಾಗುವುದಕ್ಕೆ ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ ಅನ್ವಯವಾಗತಕ್ಕದ್ದು.

ವಿವರಣೆ.–ಈ ಉಪ-ಪ್ರಕರಣದ ಉದ್ದೇಶಗಳಿಗಾಗಿ ಭೂಮಿಯನ್ನು (ಜೀವಂತ ವ್ಯಕ್ತಿಗಳ ನಡುವೆ ಮಾರಾಟದ, ದಾನದ, ಸ್ವಾಧೀನ ಸಹಿತ ಅಡಮಾನದ, ವಿನಿಮಯದ, ಗೇಣಿಯ ಮೂಲಕವಾಗಿಯಾಗಲಿ ಅಥವಾ ಇತರ ಯಾವುದೇ ಪ್ರಕಾರದ ವಿಲೇವಾರಿಯ ಮೂಲಕವಾಗಿಯಾಗಲಿ) ಪಕ್ಷಕಾರರ ಕಾರ್ಯದ ಮೂಲಕವಾಗಿಯಾಗಲಿ ವರ್ಗಾಯಿಸಲಾಗಿದ್ದರೆ ಅದನ್ನು ವರ್ಗಾಯಿಸಲಾಗಿದೆಯೆಂದು ಭಾವಿಸತಕ್ಕದ್ದು.]